ಸಿ.ಸಿ. ನಂಬರ್‌ಃ**466/2015**
ಸಿ.ಡಬ್ಲ್ಯು‌ಃ**15** ಪಿ.ಡಬ್ಲ್ಯು‌ಃ**10**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್‌ಃ**466/2015**

| | |
|---|---|
| ಸಾಕ್ಷಿಯ ಹೆಸರು | : ರಾಮಲಿಂಗಪ್ಪ |
| ತಂದೆಯ ಹೆಸರು | : ಗೂರಪ್ಪ ಬಂಗಾರಿ |
| ವಯಸ್ಸು | : 44 ವರ್ಷ |
| ಉದ್ಯೋಗ | : ಮುಖ್ಯಪೇದೆ , ಅಶೋಕ ನಗರ ಪೋಲಿಸ್ ಠಾಣೆ, ಹುಬ್ಬಳ್ಳಿ |
| ವಾಸಸ್ಥಳ | : ಹುಬ್ಬಳ್ಳಿ |

ದಿಃ **28-06-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನಾನು 05-07-2011 ರಿಂದ 2017 ರವರೆಗೆ ಪೋಲಿಸ್ ಪೇದೆ ಎಂದು ವಿದ್ಯಾಗಿರಿ ಪಿ ಎಸ್ ದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ18-11-2014 ರಂದು ಸಾಯಂಕಾಲ 7.00 ಗಂಟೆಯ ಸಮಾರಿಗೆ ಚಾಸಾ.18 ರವರ ಸೂಚನೆಯ ಮೇರೆಗೆ ಬಾತ್ಮಿ ಬಂದಿದ್ದು, ಯಾಲಕ್ಕಿಶೆಟ್ಟರ್ ಕಾಲೋನಿಯಲ್ಲಿ ಇಬ್ಬರು ವ್ಯಕ್ತಿಗಳು ಬಂಗಾರ ಮಾರಾಟ ಮಾಡಲು ಮೋಟಾರ್ ಸೈಕಲ್ ಮೇಲೆ ಬಂದಿದ್ದಾರೆ ಎಂದು ವಿಷಯ ನಮಗೆ ತಿಳಿಸಿದರು. ಚಾಸಾ.18 ರವರು ಇಬ್ಬರು ಪಂಚರನ್ನು ಕರೆಯಿಸಿ ಅವರಿಗೆ ಬಾತ್ಮಿ ವಿಷಯ ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡರು. ನಾನು ಹಾಗೂ ಚಾಸಾ.13,14,16,17 ರವರಿಗೂ ಸಹ ಮಾಹಿತಿಯನ್ನು ತಿಳಿಸಿದ ನಂತರ ನಾವೆಲ್ಲರೂ ಕೂಡಿಕೊಂಡು ಇಲಾಖಾ ಜೀಪ್ ದಲ್ಲಿ ಗಾಂಧಿ ನಗರದಿಂದ ಯಾಲಕ್ಕಿಶೆಟ್ಟರ್ ಕಾಲೋನಿಗೆ

ಹೋದೆವು. ನಮ್ಮ ಇಲಾಖಾ ಜೀಪ್ ನ್ನು ನೋಡಿ ಇಬ್ಬರು ಆರೋಪಿತರು ಓಡಿ ಹೋಗಲು ಪ್ರಯತ್ನ ಪಟ್ಟರು, ಆದರೆ ನಾವೆಲ್ಲರೂ ಸೇರಿ ಹಿಡಿದುಕೊಂಡು ನಂತರ ಅವರನ್ನು ವಿಚಾರಿಸಲಾಗಿ, ತಮ್ಮ ಹೆಸರನ್ನು ಅವರಿಬ್ಬರು ಸರಿಯಾಗಿ ಹೇಳಲಿಲ್ಲ. ಹಾಗೂ ಯಾವ ವಿಷಯವನ್ನು ನಮಗೆ ಸರಿಯಾಗಿ ಹೇಳಲಿಲ್ಲ. ಇಬ್ಬರು ವ್ಯಕ್ತಿಗಳನ್ನು ಚಾಸಾ.18 ರವರ ಮುಂದೆ ಹಾಜರು ಪಡಿಸಿ, ನಂತರ ಬಾಲಾಜಿ ಗೋಲ್ಡ ಅಂಗಡಿಯ ಹತ್ತಿರ ಇಬ್ಬರು ವ್ಯಕ್ತಿಗಳನ್ನು ಪರಿಶೀಲನೆ ಮಾಡಿದೆವು. ಆಗ ಮೂರು ಬಂಗಾರದ ತುಂಡು ಚೈನ್ ಗಳು ಆರೋಪಿ ನಂ.1 ರವರ ಹತ್ತಿರ ಇದ್ದವು. ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಪತ್ತಾರ ಆದ ಪಾಲಂಕರ್ ಚಾಸಾ.12 ರವರನ್ನು ಕರೆಯಿಸಿ, ಅವರು ಅದನ್ನು ಪರಿಶೀಲಿಸಿ, ಅದು ಬಂಗಾರದ ಆಭರಣ ಇರುತ್ತದೆ ಎಂದು ತಿಳಿಸಿದರು. ಅದನ್ನು ತೂಕ ಮಾಡಲಾಗಿ 21 ಗ್ರಾಂ ದ ಬಂಗಾರದ ಚೈನ್ ಇತ್ತು. ಆರೋಪಿತರನ್ನು 8.00 ಗಂಟೆಗೆ ದಸ್ತಗಿರಿ ಮಾಡಿ, ಪಂಚನಾಮೆ ಮಾಡಿ ಬಂಗಾರದ ಆಭರಣಗಳನ್ನು ಹಾಗೂ ಒಂದು ಜರ್ಕಿನ್ ಹಾಗೂ ಮೈಕ್ರೊ ಮ್ಯಾಕ್ಸ ಮೊಬೈಲ್ ಗಳನ್ನು ಆರೋಪಿ ನಂ.1 ರವರಿಂದ ಹಾಗೂ ಎರಡನೇ ಆರೋಪಿ ಕಡೆಂಲುಂದ ಒಂದು ಮೋಟಾರ್ ಸೈಕಲ್ ನ್ನು , ಸ್ಯಾಮಸಂಗ್ ಮೊಬೈಲ್ ಗಳನ್ನು ಚಾಸಾ.18 ರವರು ತಮ್ಮ ವಶಕ್ಕೆ ಪಡೆದುಕೊಂಡರು. ಪಂಚನಾಮೆಯನ್ನು ಚಾಸಾ.13 ರವರು ಬರೆದರು. ನಂತರ ಮುದ್ದೆಮಾಲುಗಳು ಹಾಗೂ ಆರೋಪಿತರೊಂದಿಗೆ ಪೋಲಿಸ್ ಠಾಣೆಗೆ ಬಂದೆವು.

ಆರೋಪಿತರನ್ನು ವಿಚಾರಣೆ ಮಾಡಲಾಗಿ ಸಾಧನಕೇರಿ, ಚೇತನ ನಗರ, ಧಾರವಾಡದ ಮಾಳಮಡ್ಡಿ, ಗಾಂಧಿನಗರ ಒಂದನೇ ಕ್ರಾಸ್ ಹಾಗೂ ಧಾರವಾಡದ ಹತ್ತಿಕೊಳ್ಳದ ಹತ್ತಿರ ಚೈನ್ ಸ್ಯಾಚಿಂಗ್ ಮಾಡಿದ ಬಗ್ಗೆ ತಿಳಿಸಿ ಒಪ್ಪಿಕೊಂಡರು.

ಸ್ವಲ್ಪ ಬಂಗಾರವನ್ನು ಮಾರಾಟ ಹಾಗೂ ಅಡವನ್ನು ಮಣಿಪುರಂ ಗೋಲ್ಡ ದಲ್ಲಿ ಇಟ್ಟಿದ್ದೇವೆ, ಹಾಗೂ ಮೋಟಾರ್ ಸೈಕಲ್ ನ್ನು ಮುಚ್ಚಿಟ್ಟಿದ್ದೇವೆ ಎಂದು ತಿಳಿಸಿದರು. ದಿಃ19-11-2014 ರಂದು ಮಣಿಪುರಂ ಗೋಲ್ಡ ಹಾಗೂ ಮೋಟಾರ್ ಸೈಕಲ್ ನ್ನು ತೋರಿಸುತ್ತೇವೆ

ಎಂದು ಹೇಳಿದರು. ನನಗೆ ಹಾಗೂ ಚಾಸಾ.13 ,14,16,17 ರವರಿಗೆ ಬರಲು ಹೇಳಿದರು. ಮೇಲಿನ ವಿಷಯವನ್ನು ತಿಳಿಸಿದರು. ಹಾಗೂ ಉಳಿದ ಪಂಚರನ್ನು ಬರಲು ತಿಳಿಸಿದರು. ನಾವೆಲ್ಲರೂ ಕೂಡಿಕೊಂಡು ಆರೋಪಿತರೊಂದಿಗೆ ಅವರು ತೋರಿಸಿದ ಸ್ಥಳವಾದ ನವನಗರ 2 ನೇ ಕ್ರಾಸ್ ಗೆ ಹೋದೆವು. ಮಣಪುರಂ ಫೈನಾನ್ಸ ಒಂದನೇ ಮಹಡಿಯಲ್ಲಿತ್ತು. ಚಾಸಾ.11 ಮ್ಯಾನೇಜರ್ ಎಂದು ಇದ್ದ. ಆರೋಪಿ ನಂ.1 ಬಂಗಾರ ಒತ್ತಿ ಇಟ್ಟ ಬಗ್ಗೆ ಹೇಳಿದನು. ಎರಡನೇ ಆರೋಪಿಯು ಸಹ ನನ್ನ ಜೊತೆಗೆ ಇದ್ದ. ಚಾಸಾ.12 ರವರು ತಮಗೆ ಮಾರಾಟ ಮಾಡಿದ ಎರಡು ಎಳೆ ಮಂಗಳಸೂತ್ರ ಬಂಗಾರ 27 ಗ್ರಾಂನ್ನು ಕೊಟ್ಟರು. ಕಟ್ ಆದ ಬಂಗಾರದ ಚೈನ್ 26.5 ಗ್ರಾಂ ನ್ನು ಕೊಟ್ಟರು. 2 ಎಳೆಯ ಮಂಗಳಸೂತ್ರ ಹಾಗೂ ಬಂಗಾರದ ಎರಡು ತಾಳಿ, ಮೂರು ಗುಂಡು ಅದು 41.4 ಗ್ರಾಂ ನು ಕೊಟ್ಟರು. ಪಂಚರ ಸಮಕ್ಷಮ ಪಂಚನಾಮೆ ಮಾಡಿಸಿ ಎಲ್ಲ ಮುದ್ದೆಮಾಲುಗಳನ್ನು ಜಪ್ತಿ ಪಡಿಸಿದೆವು. ಆರೋಪಿ ನಂ.1 ರವರು ಮನೆಯಲ್ಲಿ ಮೋಟಾರ ಸೈಕಲ್ ಹಾಗೂ ಬಂಗಾರದ ಚೈನ್ ಇದೆ ಎಂದು ತಿಳಿಸಿದ ಮೇರೆಗೆ ನಾವು ಅಮರಗೋಳದ ಸೋಗಿ ಪ್ಲಾಟ್ ದಲ್ಲಿ ಅವರ ಮನೆ ಇದ್ದು, ನಾವು ಮನೆಯ ಒಳಗೆ ಹೋಗಿ ಪರಿಶೀಲನೆ ಮಾಡಲಾಗಿ ಆರೋಪಿ ನಂ.1 ರವರು ಒಂದು ಚೈನ್ ಕೊಟ್ಟರು. ಇನ್ನೊಂದು 8 ಗ್ರಾಂ ದ ಚೈನ್ ಕೊಟ್ಟರು. ಎರಡು ತಾಳಿ ಹಾಗೂ 3 ಗುಂಡು ಗಳನ್ನು ಕೊಟ್ಟರು. ಒಟ್ಟು 5 ಗ್ರಾಂ ಇತ್ತು. ಚಾಸಾ.18 ರವರು ಆರೋಪಿ ನಂ.1 ರವರು ಹಾಜರು ಪಡಿಸಿದ ಮೋಟಾರ್ ಸೈಕಲ್ ಕೆ ಎ 25 ಇಸಿ 9148 ನೇದ್ದನ್ನು ಹಾಗೂ ಒಂದು ಹೆಲ್ಮೆಟ್ ಜಪ್ತಿ ಪಡಿಸಿದರು. ಇವೆಲ್ಲ ವಸ್ತುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಚಾಸಾ.18 ರವರು ಜಪ್ತಿ ಪಡಿಸಿದರು. ಎಲ್ಲ ಮುದ್ದೇಮಾಲುಗಳನ್ನು ತೆಗೆದುಕೊಂಡು ಆರೋಪಿತರೊಂದಿಗೆ ಠಾಣೆಗೆ ಬಂದೆವು. ಈ ವಿಷಯದ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ಜಪ್ತಿ ಪಡಿಸಿರುವ ವಸ್ತುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ನಿಪಿ.2 ರಲ್ಲಿರುವ ಬಂಗಾರದ ಚೈನ್ ನ್ನು ನೋಡಿ ಗುರುತಿಸುತ್ತಾರೆ.

ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಮೋಟಾರ್ ಸೈಕಲ್ ನೋಡಿದರೆ ಗುರುತಿಸುತ್ತೇನೆ.

ಪಾಟೀಸವಾಲು: ಆರೋಪಿ ನಂ.**1** ಪರ ವಕೀಲರಿಂದ

ನನ್ನ ಹೇಳಿಕೆಯು ಕ್ರೈಮ್ ನಂ.243/2014 ಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಒಟ್ಟು 5 ಪ್ರಕರಣಗಳು ಆರೋಪಿತರ ಮೇಲೆ ಇದ್ದು, ಸದರಿ 5 ಪ್ರಕರಣದಲ್ಲಿ 4 ಪ್ರಕರಣಗಳಲ್ಲಿ ಆರೋಪಿತರು ಬಿಡುಗಡೆ ಹೊಂದಿರುತ್ತಾರೆ ಎಂದರೆ ಸರಿ. ನಾಲ್ಕು ಪ್ರಕರಣದಲ್ಲಿ ನಾನು ಸಾಕ್ಷಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿ ಹೇಳದೇ ಇದ್ದರೂ ಸಹ ಹೇಳಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಚಾಸಾ.12 ರವರ ಹೆಸರನ್ನು ಹೇಳಿಲ್ಲ ಎಂದರೆ ಸರಿಯಲ್ಲ. 5 ಪ್ರಕರಣಗಳಲ್ಲಿ ನಾನು ಪ್ರತ್ಯೇಕವಾಗಿ ಹೇಳಿಕೆ ನೀಡಿರುತ್ತೇನೆ. ಈ ಪ್ರಕರಣೆಕ್ಕೆ ಸಂಬಂಧಿಸಿದಂತೆ  ನಾನು ಕೊಟ್ಟ ಹೇಳಿಕೆ ದಾಖಲೆಯಲ್ಲಿ ಲಭ್ಯ ಇಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯ ಅಕ್ಕ ಪಕ್ಕ ಹಾಗೂ ಬಾಲಾಜಿ ಗೋಲ್ಡ ಅಂಗಡಿಯ ಸುತ್ತ ಮುತ್ತ ತುಂಬಾ ಮನೆಗಳು ಇವೆ ಎಂದರೆ ಸರಿ.  ಬಾಲಾಜಿ ಗೋಲ್ಡ ಅಂಗಡಿಗೆ ಹತ್ತಿ ಸುಮಾರು 3 ರಿಂದ 4 ದಿಕ್ಕುಗಳಿಂದ  ರಸ್ತೆಗಳು ಸಂಪರ್ಕ ಹೊಂದುತ್ತವೆ ಎಂದರೆ ಸರಿ. ಆರೋಪಿ ನಂ.1 ಮತ್ತು 2 ರವರು ಯಾವ ದಿಕ್ಕಿಗೆ ಓಡಿದರು, ಯಾವ ರಸ್ತೆಯಿಂದ ಓಡಿದರು ಎಂದು ನನ್ನ ಹೇಳಿಕೆಯಲ್ಲಿ  ಹೇಳಿಲ್ಲ ಎಂದರೆ ಸರಿ. ನಾವೆಲ್ಲರೂ ಕೂಡಿಕೊಂಡು ಆರೋಪಿತನನ್ನು ಹಿಡಿದಿದ್ದೇವೆ ಎಂದರು.

ನಾವು ಯಾವುದೇ ಪಂಚನಾಮೆ ಮಾಡಿಲ್ಲ, ಆರೋಪಿತರ ವಶದಿಂದ ಯಾವುದೇ ಮುದ್ದೇಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ಥಳಗಳಿಗೆ ನಾವು ಹೋಗಿಲ್ಲ, ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ  ಎಂದರೆ ಸರಿಯಲ್ಲ. ಆರೋಪಿತರನ್ನು ಆ ಸ್ಥಳದಲ್ಲಿ ದಸ್ತಗಿರಿ ಮಾಡಿಲ್ಲ

ಎಂದರೆ ಸರಿಯಲ್ಲ. ಆದಿನ ನಾನು ಕರ್ತವ್ಯದಲ್ಲಿ ಇರಲಿಲ್ಲ ಹಾಗೂ ಯಾವುದೇ ದಾಳಿಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ನಂ.**2** ಪರ ವಕೀಲರಿಂದ

(The cross examination of accused No.2 is got adopted on the submission of learned counsel for accused No.1.)

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.